# ೨೦೦೮ ರ ಕಡೆಯ ದಿನಗಳಲ್ಲಿ ನಡೆದ ಘಟನೆಗಳ ಬಗ್ಗೆ ಅಧ್ಯಕ್ಷರ ಅಭಿಪ್ರಾಯ

ಜನವರಿ ೨೦೦೯

ಅಕ್ಕರೆಯ ಕನ್ನಡಿಗ,

2008 ಕಳೆದು 2009 ಬಂದಿದೆ. ಕಳೆದ ವರ್ಷದ ಕೊನೆ ಕೊನೆಗೆ ನಡೆದ ಕೆಲ ಘಟನೆಗಳ ಬಗ್ಗೆ ನಿಮ್ಮ ಗಮನ ಸೆಳೆಯಲು ಬಯಸುತ್ತೇನೆ. ಕಾವೇರಿ ನದಿ ಹರಿಯುವ ಹೊಗೇನಕಲ್ ಪ್ರದೇಶದಲ್ಲಿ ತಮಿಳುನಾಡು ಯೋಜಿಸಿದ್ದ ಯೋಜನೆಯ ವಿರುದ್ಧವಾಗಿ ಕನ್ನಡಿಗರು ನಡೆಸಿದ ಪ್ರತಿಭಟನೆಗಳಿಗೆ ಮಣಿದು ತಮಿಳುನಾಡು ಯೋಜನೆಯನ್ನು ತಡೆಹಿಡಿದಿರುವುದು ತಮಗೆ ತಿಳಿದ ವಿಷಯವೇ ಆಗಿದೆ. ಈ ಡಿಸೆಂಬರ್ ತಿಂಗಳಲ್ಲಿ ತಮಿಳುನಾಡಿನ ಮುಖ್ಯಮಂತ್ರಿಗಳಾದ ಕರುಣಾನಿಧಿಯವರು ಮತ್ತೊಮ್ಮೆ ಈ ಯೋಜನೆಯ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡಿದರು. 'ಕನ್ನಡಿಗರು ತಮಿಳುನಾಡಿನ ಕುಡಿವ ನೀರಿನ ಯೋಜನೆಗೆ ಅಡ್ಡಗಾಲು ಹಾಕುತ್ತಿದ್ದಾರೆ, ಇವರಿಗೆ ಮಾನವೀಯತೆ ಇಲ್ಲ' ಎನ್ನುವಂತೆ ಬಿಂಬಿಸಲು ಮತ್ತೆ ಮತ್ತೆ ಪ್ರಯತ್ನ ಮಾಡುತ್ತಿರುವುದನ್ನು ನಾವು ಖಂಡಿಸಲೇಬೇಕಿದೆ. ನಮ್ಮ ವಿರೋಧ ತಮಿಳುನಾಡು ಉದ್ದೇಶಿಸಿರುವ ಕುಡಿವ ನೀರಿನ ಯೋಜನೆ ಬಗ್ಗೆ ಅಲ್ಲ, ಅದು ನಮ್ಮ ನೆಲವನ್ನು ಕಬಳಿಸಿ ಅಕ್ರಮವಾಗಿ ಅಲ್ಲಿ ಕಾಮಗಾರಿ ಮಾಡುವುದರ ವಿರುದ್ಧ. ಅಂದರೆ ಹೊಗೇನಕಲ್ ವಿವಾದ ನದಿ ನೀರು ಹಂಚಿಕೆಯ ವಿವಾದವಲ್ಲ. ಅದು ಗಡಿ ವಿವಾದ. ಈಗಲೂ ಆ ಪ್ರದೇಶದಲ್ಲಿ ಜಂಟಿಯಾಗಿ ಸರ್ವೇ ನಡೆಸಿ ಗಡಿ ತೀರ್ಮಾನವಾಗಲಿ ಎನ್ನುವುದಷ್ಟೆ ನಮ್ಮ ಹಕ್ಕೊತ್ತಾಯ. ನಮ್ಮ ನಾಡಿನ ನೆಲವನ್ನು ತಮಿಳುನಾಡು ನುಂಗುವುದನ್ನು ಸಹಿಸಲಾಗದು ಎನ್ನುವ ಸಂದೇಶ ನೀಡಲಿಕ್ಕಾಗಿ ಕರ್ನಾಟಕ ರಕ್ಷಣಾ ವೇದಿಕೆಯ ವತಿಯಿಂದ ರಾಜ್ಯಾದ್ಯಂತ ತಮಿಳುನಾಡಿಗೆ ಸಂಪರ್ಕ ಕಲ್ಪಿಸುವ ರೈಲು, ರಸ್ತೆ ಮಾರ್ಗಗಳನ್ನು ತಡೆಯಲಾಯಿತು.

ಭಾರತೀಯ ಸ್ಟೇಟ್ ಬ್ಯಾಂಕಿನ ಖಾಲಿ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳುವಾಗ ಕನ್ನಡಿಗರನ್ನು ಕಡೆಗಣಿಸುತ್ತಿರುವ ಮತ್ತೊಂದು ಅನ್ಯಾಯದ ಘಟನೆ ನಡೆಯಿತು. ಕಳೆದ ವರ್ಷ ರೈಲ್ವೇಯಲ್ಲಿ ಡಿ ದರ್ಜೆಯ 4701 ಹುದ್ದೆಗಳಲ್ಲಿ ಪರಭಾಷಿಕರನ್ನು ತುಂಬುವ ಹುನ್ನಾರದ ನಂತರ ಇದೀಗ ಎಸ್.ಬಿ.ಐನಲ್ಲಿ 1600ಕ್ಕೂ ಹೆಚ್ಚು ಹುದ್ದೆಗಳನ್ನು ತುಂಬುವ ಪ್ರಯತ್ನಗಳು ನಡೆದವು. ನಮ್ಮ ನಾಡಿನಲ್ಲಿ ಹುಟ್ಟಿಕೊಳ್ಳುವ ಕೆಲಸಗಳಲ್ಲಿ ನಮ್ಮ ಜನರನ್ನು ನೇಮಕ ಮಾಡಿಕೊಳ್ಳಿ ಎಂದು ಹೋರಾಟ ಮಾಡಬೇಕಾದ ದುಸ್ಥಿತಿ ಈ ನಾಡಲ್ಲಿರುವುದು ಶೋಚನೀಯವಾಗಿದೆ. ಮಾಧ್ಯಮಗಳಲ್ಲಿ ವರದಿಯಾದಂತೆ ಬ್ಯಾಂಕಿನ ನೌಕರಿಗೆ ಒಟ್ಟಾರೆ ಇದುವರೆಗೆ ಆಯ್ಕೆಯಾದ 350 ಜನರಲ್ಲಿ ಕನ್ನಡಿಗರು ಬರೀ 30 ಜನ ಅನ್ನುವುದಾದರೆ ಅದೆಷ್ಟು ನ್ಯಾಯಯುತವಾಗಿ ಈ ನೇಮಕಾತಿಗಳು ನಡೆಯುತ್ತಿರಬಹುದು ಅನ್ನಿಸುವುದಿಲ್ಲವೇ? ಕನ್ನಡನಾಡಿನಲ್ಲಿ ಹುಟ್ಟಿಕೊಳ್ಳುವ ಕೆಲಸಗಳಿಗೆ ಅದರಲ್ಲೂ ನಮ್ಮಲ್ಲೇ ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಾ ಇರುವಾಗ ಹೊರನಾಡಿನ ಜನರನ್ನು ನೇಮಕಮಾಡಿಕೊಳ್ಳಬೇಕು ಅನ್ನುವುದು ಎಂತಹ ನೀತಿ? ಇಲ್ಲೇ ಅರ್ಹ ಅಭ್ಯರ್ಥಿಗಳಿಲ್ಲವೇ? ಎನ್ನಿಸುವುದಿಲ್ಲವೇ? ಇಂತಹ ಅನ್ಯಾಯವನ್ನು ಪ್ರತಿಭಟಿಸಲು ಕರ್ನಾಟಕ ರಕ್ಷಣಾ ವೇದಿಕೆ ಮುಂದಾಯಿತು. ಸಾಂಕೇತಿಕವಾಗಿ 16ನೇ ಡಿಸೆಂಬರ್‌ಂದು ಎಸ್.ಬಿ.ಐ ವಿರುದ್ಧವಾಗಿ ಪ್ರತಿಭಟನೆ ನಡೆಸಿ ಎಚ್ಚರಿಕೆ ನೀಡಲಾಯಿತು. ಮುಂದಿನ ದಿನಗಳಲ್ಲಿ ಈ ಅನ್ಯಾಯ ಸರಿಪಡಿಸದಿದ್ದಲ್ಲಿ ಉಗ್ರ ಹೋರಾಟಕ್ಕೆ ಮುಂದಾಗುವುದು ಅನಿವಾರ್ಯವಾಗುತ್ತದೆ. ಕನ್ನಡಿಗರ ಬದುಕು, ಅನ್ನದ ಪ್ರಶ್ನೆ ಸದಾ ನಮಗೆ ಮೊದಲ ಆದ್ಯತೆಯ ವಿಷಯವಾಗಿರುತ್ತದೆ.

ಇದೇ ಡಿಸೆಂಬರ್ 18ರಂದು ನಾಡಿನ ಖ್ಯಾತ ನೀರಾವರಿ ತಜ್ಞರಾದ ಶ್ರೀ.ಎಚ್.ಎನ್.ನಂಜೇಗೌಡರು ನಿಧನರಾದರು. ಕನ್ನಡನಾಡು ಕಂಡ ಅತ್ಯುತ್ತಮ ನೀರಾವರಿ ತಜ್ಞರಾಗಿ ಅವರು ಸದಾ ನಮ್ಮ ನೆನಪಿನಲ್ಲಿ ಉಳಿಯುತ್ತಾರೆ. ಕಾವೇರಿ, ಕೃಷ್ಣಾ ಸೇರಿದಂತೆ ಎಲ್ಲ ನದಿಗಳ ಬಗ್ಗೆ, ರಾಜ್ಯ ನೀರಾವರಿಯ ಬಗ್ಗೆ ಬೆರಳತುದಿಯಲ್ಲೇ ಮಾಹಿತಿ ಹೊಂದಿದ್ದ ಶ್ರೀಯುತರನ್ನು ಸಲಹೆಗಾಗಿ ಸಂಪರ್ಕ ಮಾಡದ ಸರ್ಕಾರಗಳೇ ಇಲ್ಲ. ಇವರ ನಿಧನದಿಂದ ನಾಡಿನ ನೀರಾವರಿ ಕ್ಷೇತ್ರಕ್ಕಂತೂ ತುಂಬಲಾಗದ ನಷ್ಟವಾಗಿದೆ. ಇವರಿಗೆ ಸಂತಾಪ ಸೂಚಿಸಲು ಕರ್ನಾಟಕ ರಕ್ಷಣಾ ವೇದಿಕೆ ಶೋಕಸಭೆಯೊಂದನ್ನು ಆಯೋಜಿಸಿತ್ತು. ಇವರಿಗೆ ನಮ್ಮ ಗೌರವಪೂರ್ವಕ ಶ್ರದ್ಧಾಂಜಲಿಗಳು.

ಇವೆಲ್ಲವುಗಳ ನಡುವೆ ಇದೇ ತಿಂಗಳ 17, 18ರಂದು ಬೆಂಗಳೂರಿನಲ್ಲಿ ನಡೆಯಲಿರುವ ವಿಶ್ವಕನ್ನಡಿಗರ ಜಾಗೃತಿ ಸಮಾವೇಶ ಹತ್ತಿರವಾಗುತ್ತಿದೆ. ಇದನ್ನು ಹಿಂದೆಂದೂ ಇಲ್ಲದಂತಹ ಉತ್ಸಾಹದಿಂದ ಯಶಸ್ವಿಗೊಳಿಸಲು ನಮ್ಮ ಕಾರ್ಯಕರ್ತರು ಸಜ್ಜಾಗಿದ್ದಾರೆ. ಈ ಕಾರ್ಯಕ್ರಮದ ಸಿದ್ಧತೆಗಳು ಭರದಿಂದ ನಡೆಯುತ್ತಿದೆ. ತಾವುಗಳೆಲ್ಲಾ ತಪ್ಪದೇ ಈ ಸಮಾವೇಶದಲ್ಲಿ ಭಾಗವಹಿಸಬೇಕೆಂದು ಈ ಮೂಲಕ ಮತ್ತೊಮ್ಮೆ ಕೋರಿಕೊಳ್ಳುತ್ತೇನೆ.

ವಂದನೆಗಳು,
ಟಿ.ಎ.ನಾರಾಯಣ ಗೌಡ
ರಾಜ್ಯಾಧ್ಯಕ್ಷರು